ಕಿರುಚಿತ್ರ

# ಕಾಣ್ಕೆಗೆ ಮಾತಿನ ಪರದೆ...

■ ಗೌರಿ





**ಹೆಸರು:** ಇಕ್ಷಣ
**ನಿರ್ದೇಶನ:** ಪ್ರಸನ್ನ ವಿ.ಎಂ.
**ನಿರ್ಮಾಣ:** ಸುಸ್ಮಿತ ಸಮೀರ
**ಛಾಯಾಗ್ರಹಣ:** ಮಹೇನ್ ಸಿಂಹ
**ತಾರಾಗಣ:** ಖುಷಿ ರವಿ, ಕೆ.ಎಸ್. ಶ್ರೀಧರ್, ಸೀತಾ ಕೋಟೆ, ಸಂಕಲ್ಪ ಎಸ್.

ಸ್ತ್ರೀವಾದದ ಹಲವು ಜನಪ್ರಿಯ ‘ಸ್ಟೇಟ್‌ಮೆಂಟ್’ಗಳು ನಮ್ಮ ನಡುವೆ ಓಡಾಡುತ್ತಲೇ ಇರುತ್ತವೆ. ಅಷ್ಟೇ ಅಲ್ಲ, ಅದಕ್ಕೆ ವಿರುದ್ಧವಾದ ‘ಕೌಂಟರ್’ಗಳೂ ಜನರ ನಡುವೆ ಅಷ್ಟೇ ಜನಪ್ರಿಯವಾಗಿವೆ. ಆದರೆ ಸ್ತ್ರೀವಾದ ಎನ್ನುವುದು ಬರೀ ಸ್ಟೇಟ್‌ಮೆಂಟುಗಳಿಂದ ಅರ್ಥಮಾಡಿಕೊಳ್ಳುವಷ್ಟು ಸರಳವಲ್ಲ.

ಸ್ತ್ರೀವಾದದ ಕುರಿತಾದ ಅಂಥ ಸ್ಟೇಟ್‌ಮೆಂಟ್‌ಗಳು ಮತ್ತು ಅದರ ಕೌಂಟರ್‌ಗಳನ್ನೇ ಪ್ರಧಾನವಾಗಿ ಇಟ್ಟುಕೊಂಡು ಮಾಡಿದ ಕಿರುಚಿತ್ರ ‘ಇಕ್ಷಣ’. ಹೀಗೆ ಸ್ಟೇಟ್‌ಮೆಂಟ್‌ಗಳನ್ನೇ ನೆಚ್ಚಿಕೊಂಡಿರುವುದರಲ್ಲಿಯೇ ಈ ಚಿತ್ರದ ವೈಫಲ್ಯವೂ ಇದೆ.

ಕಿರುಚಿತ್ರ ಆರಂಭವಾಗುವುದೇ ಅಪ್ಪ–ಮಗಳ ಜಗಳದೊಂದಿಗೆ. ಮಗ, ಮಗಳು ಹಾಲ್‌ನಲ್ಲಿ ಕೂತಿದ್ದಾರೆ. ಮಗಳು ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡುತ್ತಿದ್ದರೆ, ಮಗ ಮೊಬೈಲ್‌ನಲ್ಲಿ ಮುಳುಗಿದ್ದಾನೆ. ಅಮ್ಮ ಅಡುಗೆ ಮನೆಯಲ್ಲಿ ಕೆಲಸದ ಗಡಿಬಿಡಿಯಲ್ಲಿದ್ದಾಳೆ. ಅಲ್ಲಿಗೆ ಪೇಪರ್ ಹಿಡಿದುಕೊಂಡು ಅಪ್ಪ ಬರುತ್ತಾನೆ. ‘ಕಾಫಿ’ ಎಂದು ಹೆಂಡತಿಗೆ ಆರ್ಡರ್ ಮಾಡುತ್ತಾನೆ. ತುಸು ತಡವಾಗಿದ್ದಕ್ಕೆ ‘ಎಷ್ಟೊತ್ತು’ ಎಂದು ಜೋರುಧ್ವನಿಯಲ್ಲಿ ಮಾತಾಡುತ್ತಾರೆ. ಅದನ್ನು ನೋಡಿದ ಮಗಳಿಗೆ ತಡೆಯಲಾಗದೆ, ‘ಅಮ್ಮ ಏನೋ ಮಾಡ್ತಿದ್ದಾಳೆ. ಸ್ವಲ್ಪ ಕಾಯಿ’ ಎನ್ನುತ್ತಾಳೆ. ಅಪ್ಪ ‘ನೀನೇ ಮಾಡಿಕೊಂಡು ಬರಬಹುದಲ್ಲ’ ಅನ್ನುತ್ತಾರೆ. ಮಾತಿಗೆ ಮಾತು ಬೆಳೆಯುತ್ತದೆ. ಅಮ್ಮ, ಇಡೀ ದಿನ ಕೆಲಸ ಮಾಡುವ ಬಗ್ಗೆ, ಗಂಡಸರಿಗೆ ಹೆಣ್ಣುಮಕ್ಕಳನ್ನು ಅಧೀನದಲ್ಲಿರಿಸಿಕೊಳ್ಳುವ ಬಗ್ಗೆ, ತರತಮದ ಬಗ್ಗೆ, ಅವಳು ತನ್ನ ಸರಿಸಮಾನ ದುಡಿಯಬಾರದು ಎಂಬ ಮನದಿಂಗಿತದ ಬಗ್ಗೆ ಮಗಳು ಮಾತಾಡುತ್ತಾಳೆ. ತಾನು ಈ ಮನೆಗಾಗಿ ಪಟ್ಟ ಪರಿಶ್ರಮದ ಬಗ್ಗೆ, ಕುಟುಂಬದಲ್ಲಿ ಯಾರಾದರೂ ಒಬ್ಬರು ತ್ಯಾಗ ಮಾಡಲೇಬೇಕಾದ ಅನಿವಾರ್ಯತೆಯ ಬಗ್ಗೆ, ಮಕ್ಕಳ ಶಿಕ್ಷಣಕ್ಕಾಗಿ ಒದ್ದಾಡಿದ ಬಗ್ಗೆ ತಂದೆ ವಾದ ಮಾಡುತ್ತಾರೆ.

ಸಮರ್ಥನೆಗಳು ಎರಡೂ ಕಡೆಗಳಲ್ಲಿವೆ, ಅಥವಾ ಎರಡೂ ಕಡೆಗಳಲ್ಲಿ ಇರುವ ಜನಪ್ರಿಯ ಸಮರ್ಥನೆಗಳನ್ನು ಹೇಳಿಸಲಿಕ್ಕೋಸ್ಕರವೇ ಈ ಪಾತ್ರಗಳು ನಿರ್ದೇಶಕರ ಕೈಯಲ್ಲಿ ಸ್ಪೀಕರ್‌ಗಳಾಗಿ ಬಳಕೆಯಾಗುತ್ತಿವೆ. ಕೊನೆಗೊಂದು ಹಂತದಲ್ಲಿ ಮಗಳ ಮಾತಿಗೆ ಉತ್ತರಿಸಲಾಗದೇ ಅಪ್ಪ, ‘ಇದು ನನ್ನ ಮನೆ. ನಾನು ಹೇಗೆ ಬೇಕೋ ಹಾಗೆ ಇರುತ್ತೇನೆ. ನನಗೆ ಯಾರೂ ಬುದ್ಧಿ ಹೇಳಲು ಬರಬೇಕಾಗಿಲ್ಲ’ ಎಂದು ಕಿರುಚಾಡುತ್ತಾನೆ. ಮಗಳು ‘ನಿನ್ನ ಮನೆ. ನಿನಗೆ ಬೇಕಾದ ಹಾಗೆ ಇದ್ದುಕೊ’ ಎಂದು ಮಗಳು ಮನೆ ಬಿಟ್ಟು ಹೋಗಲು ಸಿದ್ಧಳಾಗುತ್ತಾಳೆ. ಅಲ್ಲಿ ಮತ್ತದೇ ವ್ಯಾಖ್ಯಾನಗಳು, ಸಮರ್ಥನೆಗಳು.

‘ಎಲ್ಲರೂ ಅವರವರ ದೃಷ್ಟಿಯಲ್ಲಿ ಸರಿಯಾದದ್ದನ್ನೇ ಮಾಡುತ್ತಿರುತ್ತಾರೆ’ ಎಂಬ ಇನ್ನೊಂದು ಸರಳೀಕೃತ ಜನಪ್ರಿಯ ಹೇಳಿಕೆಯನ್ನೇ ನೆಚ್ಚಿಕೊಂಡಿರುವ ನಿರ್ದೇಶಕರು, ಅದನ್ನು ‘ಹೇಳಿಸಲಿಕ್ಕಾಗಿ’ ಈ ಕಿರುಚಿತ್ರ ಮಾಡಿದಂತಿದೆ. ಆದರೆ ಎಲ್ಲರಿಗೂ ಅವರವರು ಮಾಡಿದ್ದೇ ಸರಿಯಾದರೆ ಅದಕ್ಕೊಂದು ತಾರ್ಕಿಕ ಅಂತ್ಯ ಬೇಕಲ್ಲವೇ? ಬದುಕಿದ್ದಷ್ಟೂ ಅವಧಿಯ ಸಿನಿಮಾ ಮಾಡಲಿಕ್ಕಾಗುವುದಿಲ್ಲವಲ್ಲ. ಇಲ್ಲಿ ನಿರ್ದೇಶಕರು ನಿರೂಪಣೆಯಲ್ಲಿ ಒಂದು ಜಾಣ ನಡೆ ಇಟ್ಟಿದ್ದಾರೆ. ಇದುವರೆಗೆ ನಡೆದಿದ್ದೆಲ್ಲವೂ ಮಗಳು ಬರೆಯುತ್ತಿರುವ ಸ್ಕ್ರಿಪ್ಟ್ ಒಂದರ ಭಾಗ ಎನ್ನುವ ಹಾಗೆ ಮಾಡಿ, ಅಮ್ಮ – ಮಗಳು ಈ ಸ್ಕ್ರಿಪ್ಟ್‌ನ ಕ್ಲೈಮಾಕ್ಸ್ ಏನು ಮಾಡಬಹುದು ಎಂದು ಚರ್ಚಿಸುತ್ತಾರೆ! ಅಲ್ಲಿ ಮತ್ತೆ ಸರಿ–ತಪ್ಪುಗಳ ವ್ಯಾಖ್ಯಾನಗಳು. ಹೊಂದಿಕೊಂಡು ಬಾಳುವ ಉಪದೇಶಗಳು.

‘ಹೇಳಿದ್ದು ಸರಿಯಾಗಿದೆ, ಮಾಡಿದ್ದು ಸರಿಯಿಲ್ಲ’ ಎಂದು ಮಗಳ ಸ್ಕ್ರಿಪ್ಟ್ ಕುರಿತು ಅಮ್ಮ ಹೇಳಿದ ಮಾತನ್ನೇ ಈ ಕಿರುಚಿತ್ರಕ್ಕೂ ಅನ್ವಯಿಸಬಹುದು. ಬರೀ ಹೇಳುವುದುನ್ನೇ ನೆಚ್ಚಿಕೊಂಡಿರುವ ಈ ಚಿತ್ರದ ವಾಚಾಳಿತನದಲ್ಲಿ ಏನನ್ನೂ ಕಾಣುವುದೇ ಸಾಧ್ಯವಾಗುವುದಿಲ್ಲ. ಹೊಸ ತಲೆಮಾರಿನ ಹುಡುಗ ಈ ಎಲ್ಲದಕ್ಕೆ ಹೇಗೆ ಪ್ರತಿಕ್ರಿಯಿಸಬಹುದು ಎಂಬುದನ್ನೂ ಲಕ್ಷಿಸದೆ ತಮ್ಮನ ಪಾತ್ರವನ್ನು ಮೊದಲ ದೃಶ್ಯದಲ್ಲಿಯೇ ಮಾಯಮಾಡಿಬಿಡುತ್ತಾರೆ. ‘ಏನನ್ನಾದರೂ ಸಾಧಿಸಬೇಕು ಎಂದು ಇದ್ದವರನ್ನು ಯಾವಾಗಲೂ ಯಾರೂ ತಡೆಯಲು ಸಾಧ್ಯವಾಗಿಲ್ಲ. ಸಾಧಿಸಲಾಗದಿದ್ದವರು ಕಾರಣ ಹುಡುಕುತ್ತಾರಷ್ಟೆ’ ಎಂಬ ಮಾತು ಕೇಳಲಷ್ಟೇ ಸುಂದರ. ಒಂದು ಸಮಾಜ, ವ್ಯವಸ್ಥೆ ಇಷ್ಟು ಸರಳವಾಗಿರುವುದಿಲ್ಲ. ಏನನ್ನೋ ಸಾಧಿಸದಿರುವ ಬಹುಸಂಖ್ಯಾತರಿಗೂ ಸ್ವತಂತ್ರ ವ್ಯಕ್ತಿತ್ವ ಇರುತ್ತದೆ, ಸ್ವಾತಂತ್ರ್ಯದ ಹಕ್ಕು ಇರುತ್ತದೆ ಎಂಬ ಅರಿವು ನಿರ್ದೇಶಕರಿಗೆ ಇದ್ದಂತಿಲ್ಲ. ‘ಲುಕ್ ಬಿಯಾಂಡ್ ವಾಟ್ ಯು ಸೀ’ ಎಂಬ ಚಿತ್ರದೊಳಗಿನ ಮಾತನ್ನು ನಿರ್ದೇಶಕರೇ ಮತ್ತೊಂದು ಮನವರಿಕೆ ಮಾಡಿಕೊಳ್ಳಬೇಕಿದೆ.

ಬರವಣಿಗೆ ಹಂತದಲ್ಲಿ ಕೃಶವೆನಿಸುವ ಈ ಕಿರುಚಿತ್ರ, ಕಥನತಂತ್ರ, ದೃಶ್ಯಸಂಯೋಜನೆಯ ದೃಷ್ಟಿಯಿಂದ ಗಮನಸೆಳೆಯುತ್ತದೆ. ಮಹೇನ್ ಸಿಂಹ ಅವರ ಛಾಯಾಗ್ರಹಣವೇ ಈ ಚಿತ್ರವನ್ನು ನೋಡಿಸುವ ಶಕ್ತಿ. ಚಿತ್ರದ ಶೀರ್ಷಿಕೆ (ಅದು ‘ಈ ಕ್ಷಣ’ ಎಂದಾಗಬೇಕಿತ್ತಲ್ಲವೇ?) ಯಲ್ಲಿನ ದೋಷವೇ ಚಿತ್ರದೊಳಗಿನ ದೋಷವನ್ನೂ ಪ್ರತಿನಿಧಿಸುವಂತಿದೆ.

ಕಿರುಚಿತ್ರ ವೀಕ್ಷಣೆಗೆ https://bit.ly/334lMNl ಕೊಂಡಿ/ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.